**KARNATAKA LEGISLATIVE ASSEMBLY, RESEARCH AND REFERENCE BRAN[C]**

ಪತ್ರಿಕಾ ತುಣುಕುಗಳು
**PAPER CLIPPINGS**

9

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 11/1

# ಬಿಜೆಪಿಗೆ ಡಬಲ್ ಧಮಾಕ

## ಮುನಿರತ್ನ ಸುಲಭ ಜಯ | ಶಿರಾದಲ್ಲಿ ಖಾತೆ ತೆರೆದ ಕೇಸರಿ

**ಬೆಂಗಳೂರು:** ತೀವ್ರ ಕುತೂಹಲ ಹಾಗೂ ರಾಜಕೀಯ ಜಿದ್ದಾಜಿದ್ದಿಗೆ ಕಾರಣವಾಗಿದ್ದ ಶಿರಾ ಹಾಗೂ ರಾಜರಾಜೇಶ್ವರಿ ನಗರ ಉಪ ಚುನಾವಣೆಯಲ್ಲಿ ಬಿಜೆಪಿಗೆ ಜಯಗಳಿಸಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್‌ಗೆ ತೀವ್ರ ಮುಖಭಂಗವಾಗಿದೆ.

ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಮುನಿರತ್ನ 57,936 ಮತಗಳ ಅಂತರದಿಂದ ಗೆಲುವು ಸಾಧಿಸಿದರೆ, ಶಿರಾ ಕ್ಷೇತ್ರದಲ್ಲಿ ಡಾ.ರಾಜೇಶ್‌ಗೌಡ 12,949 ಮತಗಳ ಅಂತರದಿಂದ ಗೆದ್ದು ಚೊಚ್ಚಲ ವಿಧಾನಸಭೆ ಪ್ರವೇಶಕ್ಕೆ ದಾರಿ ಮಾಡಿಕೊಂಡಿದ್ದಾರೆ.

ಉಪ ಚುನಾವಣೆ ಫಲಿತಾಂಶದ ಮೂಲಕ ಬಿಜೆಪಿ ವಿಜಯಯಾತ್ರೆ ಮುಂದುವರಿಸಿದ್ದು, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನಾಯಕತ್ವಕ್ಕೂ ಶಕ್ತಿ ಬಂದಂತಾಗಿದೆ. ಕೊರೊನಾ ಹಾಗೂ ಪ್ರವಾಹ ಪರಿಸ್ಥಿತಿ ನಿರ್ವಹಣೆಯಲ್ಲಿ ಸರ್ಕಾರ ವಿಫಲವಾಗಿದೆ ಎಂದು ಟೀಕಿಸಿದ್ದ ಪ್ರತಿಪಕ್ಷಗಳ ಬಾಯಿ ಮುಚ್ಚಿಸಿದಂತಾಗಿದೆ. ವಿಶೇಷವೆಂದರೆ, ಈ ಎರಡೂ ಕ್ಷೇತ್ರಗಳು ಬಿಜೆಪಿಗೆ ಇದೇ ಮೊದಲ ಬಾರಿಗೆ ದಕ್ಕುತ್ತಿದೆ; ಅದರಲ್ಲೂ ಇಬ್ಬರೂ ಕಾಂಗ್ರೆಸ್‌ನಿಂದ ವಲಸೆ ಬಂದವರು.

2018 ರಲ್ಲಿ ಎರಡೂ ಕ್ಷೇತ್ರಗಳೂ ಕಾಂಗ್ರೆಸ್-ಜೆಡಿಎಸ್ ಪಾಲಾಗಿದ್ದವು. ಇದೀಗ ಉಪ ಚುನಾವಣೆಯಲ್ಲಿ ಎರಡನ್ನೂ ಗೆಲ್ಲುವ ಮೂಲಕ ಬಿಜೆಪಿ ಬಲ ಹೆಚ್ಚಿಕೊಂಡಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸಹಿತ ಕಾಂಗ್ರೆಸ್‌ನ ಘಟಾನುಘಟಿ ನಾಯಕರ ತಂತ್ರಗಾರಿಕೆ ಬಿಜೆಪಿಯ ಮುಂದೆ ನಡೆಯದಂತಾಗಿದೆ. ಕಾಂಗ್ರೆಸ್ ಹಿಂದೆ ಗೆದ್ದಿದ್ದ ರಾಜರಾಜೇಶ್ವರಿ ನಗರವನ್ನೂ ಉಳಿಸಿಕೊಳ್ಳಲು ಆಗಲಿಲ್ಲ, ಶಿರಾ ಕ್ಷೇತ್ರ ಮತ್ತೆ ವಶಕ್ಕೆ ಪಡೆಯುವ ಕನಸೂ ಈಡೇರಲಿಲ್ಲ ಎಂಬಂತಾಗಿದೆ.

ಜೆಡಿಎಸ್‌ಗೂ ಉಪ ಚುನಾವಣೆ ಫಲಿತಾಂಶದಿಂದ ತೀರಾ ಹಿನ್ನಡೆಯುಂಟಾಗಿದ್ದು, ಶಿರಾ ಕ್ಷೇತ್ರ ಕಳೆದುಕೊಂಡ ಜತೆಗೆ ರಾಜರಾಜೇಶ್ವರಿ ನಗರದಲ್ಲಿ ಠೇವಣಿ ಕಳೆದುಕೊಂಡು ಮುಖಭಂಗ ಅನುಭವಿಸುವಂತಾಗಿದೆ. ಶಿರಾದಲ್ಲಿ ಅನುಕಂಪ ನೆಚ್ಚಿದ್ದ ಜೆಡಿಎಸ್‌ಗೆ ಭಾರೀ ನಿರಾಸೆಯಾಗಿದ್ದು 3ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಗುವಂತಾಗಿದೆ.

**ಸಂಘಟಿತ ಹೋರಾಟ:** ಸಿಎಂ ಯಡಿಯೂರಪ್ಪ, ಪಕ್ಷದ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸಹಿತ ಇಡೀ ಸಚಿವ ಸಂಪುಟವೇ ಅಖಾಡಕ್ಕಿಳಿದು ಬೂತ್‌ಮಟ್ಟದಲ್ಲಿ ತಂತ್ರಗಾರಿಕೆ ಮೂಲಕ ಎರಡೂ ಕ್ಷೇತ್ರಗಳನ್ನೂ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

▶ 10ನೇ ಪುಟಕ್ಕೆ





| | | | |
|---|---|---|---|
| ಆರ್.ಆರ್.ನಗರ | ಮುನಿರತ್ನ | ಕುಸುಮಾ ಎಚ್. | ಕೃಷ್ಣಮೂರ್ತಿ |
| | 1,25,990 | 67,877 | 10,269 |
| | ಗೆಲುವಿನ ಅಂತರ 58,113 | ಒಟ್ಟು ಮತಗಳು 2,09,488 | |
| ಶಿರಾ | ಡಾ.ರಾಜೇಶ್‌ಗೌಡ | ಟಿ.ಬಿ.ಜಯಚಂದ್ರ | ಅಮ್ಮಾಜಮ್ಮ |
| | 76,564 | 63,150 | 36,783 |
| | ಗೆಲುವಿನ ಅಂತರ 13,414 | ಒಟ್ಟು ಮತಗಳು 1,82,239 | |

### ಮುನಿರತ್ನ ವಿಜಯದ ಹಿಂದಿನ ಮರ್ಮ

ಶಾಸಕರಾಗಿದ್ದಾಗ ಆರ್.ಆರ್. ನಗರದಲ್ಲಿ ಈ ಹಿಂದೆ ಮಾಡಿದ ಕೆಲಸ ಮುನಿರತ್ನ ಅವರ ಕೈ ಹಿಡಿದವು. ಜತೆಗೆ ಈ ಕ್ಷೇತ್ರದಲ್ಲಿ ಬಿಜೆಪಿ ಪ್ರಭಾವವೂ ಹೆಚ್ಚಾಗಿದ್ದು, ಇವರೂ ಮುನಿರತ್ನ ಕಡೆಗೆ ವಾಲಿದ್ದಾರೆ. ಕೊರೊನಾ ಕಾಡುತ್ತಿದ್ದ ಸಮಯದಲ್ಲಿ ಕ್ಷೇತ್ರಾದ್ಯಂತ ಓಡಾಡಿಕೊಂಡು ಜನರ ಜತೆ ಬೆರೆತಿರುವುದು ಜಯಕ್ಕೆ ಕಾರಣವಾಗಿರಬಹುದು. ಆರ್. ಅಶೋಕ್ ನೇತೃತ್ವದಲ್ಲಿ ಇಡೀ ಪಕ್ಷ ಸಂಘಟಿತವಾಗಿ ಕೆಲಸ ಮಾಡಿರುವುದು ಪ್ಲಸ್ ಆಗಿದೆ.

### ಶಿರಾದಲ್ಲಿ ಬಿಜೆಪಿ ಗೆದ್ದದ್ದು ಹೇಗೆ?

ಇದುವರೆಗೆ ಶಿರಾ ಕ್ಷೇತ್ರದಲ್ಲಿ ಬಿಜೆಪಿ ಖಾತೆ ತೆರೆದಿದ್ದೇ ಇಲ್ಲ. ಈ ಬಾರಿ ಕ್ಷೇತ್ರವನ್ನು ಸವಾಲಾಗಿ ತೆಗೆದುಕೊಂಡ ನಾಯಕರು, ಸಂಘಟಿತವಾಗಿ ಪ್ರಚಾರ ನಡೆಸಿದರು. ಬಿಎಸ್‌ವೈ ಪುತ್ರ ವಿಜಯೇಂದ್ರ ಕ್ಷೇತ್ರದಲ್ಲೇ ಉಳಿದರು. ಕೆ.ಆರ್. ಪೇಟೆಯಲ್ಲಿ ನಡೆಸಿದಂತೆ ಇಲ್ಲೂ ಪಕ್ಷ ಸಂಘಟಿಸಿದರು. ಕಾಂಗ್ರೆಸ್‌ನಲ್ಲಿದ್ದ ಡಾ. ರಾಜೇಶ್ ಗೌಡರನ್ನು ಕರೆತಂದು, ನಿಲ್ಲಿಸಿದ್ದೂ ಪ್ಲಸ್ ಆಯಿತು. ಜತೆಗೆ ಜೆಡಿಎಸ್ ಮತಗಳನ್ನೂ ಬಿಜೆಪಿ ಸೆಳೆಯಿತು.

## ಡಬ್ಬಲ್ ಧಮಾಕ

**1ನೇ ಪುಟದಿಂದ** ▸ ಅದರಲ್ಲೂ ಶಿರಾದಲ್ಲಿ ಬಿ.ವೈ.ವಿಜಯೇಂದ್ರ ಕಾರ್ಯತಂತ್ರವೂ ಫಲಿಸಿದಂತಾಗಿ ಕೆ.ಆರ್.ಪೇಟೆ ನಂತರ ದೊರೆತ 2ನೇ ಗೆಲುವು ಇದಾಗಿದೆ. ಆರ್.ಆರ್. ನಗರದಲ್ಲಿ ಬಿಜೆಪಿಗೆ ಗೆಲುವು ನಿರೀಕ್ಷಿತವಾದರೂ ಶಿರಾದಲ್ಲಿ ಕಷ್ಟತರವಾಗಿತ್ತು. ಆದರೆ, ಪರಿಶಿಷ್ಟರ ಮತ ಸೆಳೆಯಲು ಡಿಸಿಎಂ ಗೋವಿಂದ ಕಾರಜೋಳ ಹಾಗೂ ಸಂಸದ ನಾರಾಯಣಸ್ವಾಮಿ , ನಾಯಕ ಸಮುದಾಯದ ಮತ ಸೆಳೆಯಲು ಶ್ರೀರಾಮುಲು, ಯಾದವರ ಮತ ಸೆಳೆಯಲು ಪೂರ್ಣಿಮಾ ಹೀಗೆ ಎಲ್ಲ ನಾಯಕರ ಶ್ರಮವನ್ನೂ ಬಿಜೆಪಿ ಸಮರ್ಥವಾಗಿ ಬಳಸಿಕೊಂಡಿತು. ಜಿಲ್ಲಾಧ್ಯಕ್ಷ ಸುರೇಶ್‌ಗೌಡ ಕಳೆದ 2 ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತಿದ್ದವರನ್ನೂ ಜತೆಗೂಡಿಸಿ ಪ್ರಚಾರ ನಡೆಸಿದ್ದರು. ಆರ್.ಆರ್.ನಗರದಲ್ಲೂ ಒಕ್ಕಲಿಗ ಸಮುದಾಯದ ಸಚಿವರಿಗೆ ಹೊಣೆಗಾರಿಕೆ ವಹಿಸಿ ಡಿ.ಕೆ.ಶಿವಕುಮಾರ್‌ಗೆ ತಿರುಗೇಟು ನೀಡಲು ಬಳಸಿಕೊಳ್ಳಲಾಯಿತು.

### ಸ್ಮಾರ್ಟ್ ಕಾರ್ಯತಂತ್ರ

ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಶಿರಾದಲ್ಲಿ ಯಾದವ ಸಮುದಾಯ ದಲ್ಲಿ ಪ್ರಭಾವ ಹೊಂದಿದ್ದ ಆಂಧ್ರಪ್ರದೇಶದ ಕಾಂಗ್ರೆಸ್ ನಾಯಕ ಹಾಗೂ ಯಾದವ ಸಮುದಾಯ ದಲ್ಲಿ ಪ್ರಭಾವ



ಹೊಂದಿದ್ದ ರಘುವೀರಾ ರೆಡ್ಡಿ ಅವರ ನಿವಾಸಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದರು. ನಂತರ ಟಿ.ಬಿ. ಜಯಚಂದ್ರ ಹಾಗೂ ಕೆ.ಎನ್.ರಾಜಣ್ಣ ಅವರ ಮನೆ ಬಾಗಿಲಿಗೆ ಹೋಗಿ ಕರೆದರೂ ರಘುವೀರಾರೆಡ್ಡಿ ಶಿರಾದತ್ತ ಸುಳಿಯಲೇ ಇಲ್ಲ. ಈ ಮೂಲು ಅವರ ಬೆಂಬಲ ಬಿಜೆಪಿಗೆ ಎಂಬ ಪರೋಕ್ಷ ಸಂದೇಶ ರವಾನಿಸುವಲ್ಲಿ ಯಶಸ್ವಿಯಾದರು. ನಂತರ ರಾಜೇಶ್‌ಗೌಡ ಅವರ ಜತೆಗೂಡಿ ಪಟ್ಟನಾಯಕನಹಳ್ಳಿಗೆ ತೆರಳಿ ನಂಜಾವಧೂತ ಶ್ರೀಗಳನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿದ್ದರು. ಇದು ಫಲಿತಾಂಶದ ದಿಕ್ಕು ಬದಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು ಎಂದು ಹೇಳಲಾಗಿದೆ.